ಘಟಕಗಳನ್ನು ಅಳವಡಿಸುವ ರೈತರಿಗೆ ಒದಗಿಸಲಾಗುತ್ತಿದೆ.

(ಆ) 2010–11ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಎಲ್ಲಾ ವರ್ಗದ ರೈತರಿಗೆ ಶೇ. 75 ರಷ್ಟು (ಕೇಂದ್ರ ಪಾಲು ಶೇ. 40+ ರಾಜ್ಯದ ಪಾಲು ಶೇ. 35) ರಷ್ಟು ಸಹಾಯಧನವನ್ನು ಒದಗಿಸಲು ಆದೇಶಿಸಲಾಗಿದ್ದು. ಅದರಂತೆ ಎಲ್ಲಾ ವರ್ಗದ ರೈತರಿಗೆ ಸಹಾಯಧನ ಒದಗಿಸಲಾಗುತ್ತಿದೆ.

ಕುಡಿಯುವ ನೀರಿನಲ್ಲಿ ರಾಸಾಯನಿಕ ಕಂಡು ಬರುತ್ತಿರುವುದು

ಶ್ರೀ ನರಸಿಂಹ ಸ್ವಾಮಿ. ಜೆ. (ದೊಡ್ಡಬಳ್ಳಾಪುರ):–

305 (576) ಮಾನ್ಯ ಬಂದರು, ಒಳನಾಡು ಜಲ ಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದೊಡ್ಡಬಳ್ಳಾಪುರ ಕೈಗಾರಿಕೆ ಪ್ರದೇಶದಿಂದ ಹೊರ ಹೋಗುವ ರಾಸಾಯನಿಕ ಹಾಗೂ ಕೊಳಚೆ ನೀರು ಕಾಲುವೆಗಳ ಮೂಲಕ ಕೆರೆಗಳಿಗೆ ಸೇರುತ್ತಿದ್ದು, ಸುತ್ತಮುತ್ತಲಿನ ಹಳ್ಳಿಗಳ ಕೊಳವೆ ಬಾವಿಗಳಲ್ಲಿನ ನೀರು ಜಲ ಮಾಲಿನ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರದ ಗಮನಕ್ಕೆ ಬಂದಿದ್ದರೆ, ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಕೃಷ್ಣ ಪಾಲೇಮಾರ್ (ಬಂದರು, ಒಳನಾಡು ಜಲ ಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ

i) ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶವಾದ ಅಪೆರಲ್ ಪಾರ್ಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಕಲುಷಿತ ನೀರು ಬಾಶೆಟ್ಟಿಹಳ್ಳಿ ಕೆರೆಗೆ ಸೇರುತ್ತಿರುವುದರ ಬಗ್ಗೆ 2011ರ ಮಾರ್ಚ್ ತಿಂಗಳಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ಬಂದಿರುತ್ತದೆ. ಈ ಬಗ್ಗೆ ಮಂಡಳಿಯ ಅಧಿಕಾರಿಗಳು ಸ್ಥಳ ಪರಿವೀಕ್ಷಣೆ ನಡೆಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಅಪೆರಲ್ ಪಾರ್ಕ್‌ನಲ್ಲಿ ಸ್ಥಾಪಿಸಿರುವ ಸಾಮಾನ್ಯ ರೊಚ್ಚು ನೀರಿನ ಶುದ್ಧೀಕರಣ ಘಟಕವು ಕಾರ್ಯನಿರ್ವಹಿಸದ ಕಾರಣ ಈ ಕಾರ್ಖಾನೆಗಳ ಕಲುಷಿತ ನೀರು ಕೆರೆಗೆ ಸೇರಿತ್ತಿದ್ದುದನ್ನು ಗಮನಿಸಿರುತ್ತಾರೆ. ಮಂಡಳಿಯು ದಿನಾಂಕ 07–03–2011ರಂದು ಕೆ.ಐ.ಎ.ಡಿ.ಬಿ. ಗೆ ನೋಟೀಸ್ ಜಾರಿಮಾಡಿರುತ್ತದೆ.

ಮುಂದುವರೆದು, ಮಂಡಳಿಯು ದಿನಾಂಕ 10–03–2011ರಂದು ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಮತ್ತು ಕಾರ್ಖಾನೆಗಳ ಮಾಲೀಕರೊಂದಿಗೆ ವೈಯಕ್ತಿಕ ವಿಚಾರಣೆ ನಡೆಸಿ ಈ ಸಂಬಂದ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತದೆ ಅಲ್ಲದೆ, ಅಪೆರಲ್ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ 11 ಕಾರ್ಖಾನೆಗಳಿಗೆ ಸಾಮಾನ್ಯ ಶುದ್ಧೀಕರಣ ಘಟಕಕ್ಕೆ ಹಾಗೂ ಕಾರ್ಖಾನೆಯ ಹೊರಕ್ಕೆ ಕಲುಷಿತ ನೀರನ್ನು ಬಿಡದಂತೆ ನಿರ್ಬಂಧಿಸುವ ಆದೇಶವನ್ನು ನೀಡಲಾಗಿದೆ.

ii) 2011ರ ಜುಲೈ ತಿಂಗಳಿನಲ್ಲಿ ಅಪೆರಲ್ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಗಳಿಂದ ಶುದ್ಧೀಕರಣ ಘಟಕಕ್ಕೆ ಸೇರುವ ಒಳಚರಂಡಿ ವ್ಯವಸ್ಥೆಯ ಮ್ಯಾನೋಲ್‌ಗಳಲ್ಲಿ ಕೆಲವು ದುಷ್ಕರ್ಮಿಗಳು ಮರಳಿನ ಚೀಲಗಳನ್ನು ಹಾಕಿ ಮುಚ್ಚಿದ್ದು, ಶುದ್ಧೀಕರಣ ಘಟಕದ ಕೆಲವು ಯಂತ್ರಗಳಿಗೆ ಅಡಚಣೆ ಉಂಟು ಮಾಡಿದ ಕಾರಣ ಕಲುಷಿತ ನೀರು ಬಾಶೆಟ್ಟಿಹಳ್ಳಿ ಕೆರೆಗೆ ಸೇರಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ.

iii) ಇದೇ ಸಮಯದಲ್ಲಿ ಬಾಶೆಟ್ಟಿಹಳ್ಳಿ ಗ್ರಾಮಸ್ಥರು ಕೆರೆಗೆ ನೀರು ತರುವ ನೈಸರ್ಗಿಕ ನಾಲೆಯನ್ನು ಮಣ್ಣಿನ ತಡೆಗೋಡೆ ನಿರ್ಮಿಸಿ ಮುಚ್ಚಿರುತ್ತಾರೆ. ಇದರ ಪರಿಣಾಮವಾಗಿ ಈ ಸಲದ ಮಳೆಗಾಲದಲ್ಲಿ ಮಳೆಯ ನೀರು ಕೆರೆಯನ್ನು ಪ್ರವೇಶಿಸದೆ ಇದ್ದುದರಿಂದ ಶುದ್ಧೀಕರಣ ಘಟಕವು ಜಲಾವೃತ್ತಗೊಂಡಿರುತ್ತದೆ. ಇದರಿಂದ ಶುದ್ಧೀಕರಣ ಘಟಕದ ವಿದ್ಯುತ್ ಉಪಕರಣಗಳಿಗೆ ಹಾನಿಯಾಗಿ ಘಟಕವು ಸ್ಥಗಿತಗೊಂಡಿರುತ್ತದೆ. ಕೆ.ಐ.ಎ.ಡಿ.ಬಿ. ವತಿಯಿಂದ ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ದೂರು ನೀಡಲಾಗಿದೆ.

iv) ಈ ವಿಷಯದ ಕುರಿತು ಮಂಡಲಿಯು ದಿನಾಂಕ 10–08–2011ರಂದು ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೂ ಕೂಡ ನೋಟೀಸ್ ಜಾರಿಮಾಡಿರುತ್ತದೆ ಮತ್ತು ಅಧಿಕಾರಿಗಳೊಂದಿಗೆ ದಿನಾಂಕ 24–08–2011ರಂದು ವೈಯಕ್ತಿಕ ವಿಚಾರಣೆ ಕೂಡ ನಡೆಸಿರುತ್ತದೆ. ಈ ವಿಚಾರಣೆ ವೇಳೆಯಲ್ಲಿ ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೆ ಸಾಮಾನ್ಯ ರೊಚ್ಚು ನೀರಿನ ಶುದ್ಧೀಕರಣ ಘಟಕವನ್ನು ಕೂಡಲೇ ಸರಿಪಡಿಸಿ ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಸೂಚಿಸಿರುತ್ತದೆ.

v) ಈಗ ನೀರಿನ ಪ್ರಮಾಣವು ಇಳಿದಿರುವುದರಿಂದ ರೊಚ್ಚು ನೀರಿನ ಶುದ್ಧೀಕರಣ

ಘಟಕವನ್ನು ಪುನರ್ ಪ್ರಾರಂಭಿಸಲು ಕೆ.ಐ.ಎ.ಡಿ.ಬಿ.ಯವರು ಕ್ರಮವನ್ನು ತೆಗೆದು ಕೊಂಡಿರುತ್ತಾರೆ ಹಾಗೂ ಕೈಗಾರಿಕಾ ಪ್ರದೇಶದಿಂದ ಯಾವುದೇ ತ್ಯಾಜ್ಯ ನೀರು ಕೆರೆಯನ್ನು ಸೇರುತ್ತಿರುವುದಿಲ್ಲ. ಆದಾಗ್ಯೂ ಮತ್ತೊಮ್ಮೆ ಮಂಡಳಿಗೆ ಈ ಕುರಿತು ದೂರು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

vi) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದೊಡ್ಡಬಳ್ಳಾಪುರ ಪ್ರದೇಶದ ಪರಿಸರ ವಿಷಯಗಳ ಸಂಬಂಧ ಸರ್ಕಾರದ ವಿವಿಧ ಸಂಸ್ಥೆಗಳು ಮತ್ತು ಅಧಿಕಾರೇತರರನ್ನು ಒಳಗೊಂಡಂತೆ ಒಂದು ಕಾವಲು ಸಮಿತಿಯನ್ನು ಸಹ ದಿನಾಂಕ 22–9–2011 ರಂದು ರಚಿಸಿರುತ್ತದೆ. ಸದರಿ ಸಮಿತಿಯು ಈ ಪರಿಸರ ಸಮಸ್ಯೆಗಳನ್ನು ಪರಿಹರಿಸಲು ದಿನಾಂಕ 17–10–2011 ರಂದು ಸಭೆ ನಡೆಸಿರುತ್ತದೆ.

ಅರಿಶಿನ ಮಾರುಕಟ್ಟೆ ನಿರ್ಮಾಣ

ಶ್ರೀ ನರೇಂದ್ರ ಆರ್. (ಹನೂರು):–

306 (108) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆ ನಿರ್ಮಾಣ ಮಾಡಲು ಕಳೆದ ಆಯವ್ಯಯದಲ್ಲಿ ಘೋಷಿಸಿದ್ದ ಹಣವೆಷ್ಟು; ಅದರಲ್ಲಿ ಇಲಿಯತನಕ ಎಷ್ಟು ಹಣ ಬಿಡುಗಡೆ ಆಗಿದೆ; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಲಾಗುತ್ತದೆ?

ಶ್ರೀ ಲಕ್ಷ್ಮಣ ಸ, ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):–

(ಅ) 2009–10ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರೂ. 1.00 ಕೋಟಿ ಮಂಜೂರಾಗಿರುತ್ತದೆ. ಚಾಮರಾಜನಗರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ರೂ. 103.62 ಲಕ್ಷ ವೆಚ್ಚದಲ್ಲಿ ಎರಡು ಅರಿಶಿನ ಸಂಸ್ಕರಣ ಘಟಕಗಳು, ಎರಡು ಮುಚ್ಚಿದ ಹರಾಜುಕಟ್ಟೆಗಳು, ಎರಡು ಒಣಗಿಸುವ ಕಟ್ಟೆಗಳು, ಐದು ಸಂಖ್ಯೆ ಮಳಿಗೆಗಳ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 2010–11ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರೂ. 70.00 ಲಕ್ಷ ಮಂಜೂರಾಗಿದ್ದು, 2011–12ನೇ ಸಾಲಿನಲ್ಲಿ ಬಿಡುಗಡೆಯಾಗಿರುತ್ತದೆ.